ಎಂ ವಿ ಸಿ. ನಂ. 444/2024 ಪಿಡಬ್ಲೂಃ 1

ದಿನಾಂಕಃ 17-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರವಾಗಿಃ ಶ್ರೀ ವಿ ಜಿ ಹೆಚ್ ವಕೀಲರಿಂದಃ**

2. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನು ಹಾಗೂ ನನ್ನ ಗಂಡ ನೀಡಿರುತ್ತೇವೆ . ನಾನು ಹಿಂದೆ ರಿಕ್ಷಾದಲ್ಲಿ ತೆಂಗಿನಕಾಯಿ ಇಟ್ಟಿದ್ದೆ ಹಾಗೂ ಆಟೋದಲ್ಲಿ ಮುಂದೆ ಕುಳಿತ್ತಿದ್ದೆ . ಎದುರಿಗೆ ಬಂದ ಗಾಡಿ ಡಿಕ್ಕಿ ಮಾಡಿದ ನಂತರ ನನಗೆ ಗೊತ್ತಾಯಿತು . ಮುಂದೆ ಗಾಡಿಯಲ್ಲಿ ನಾನು ಹಾಗೂ ಡ್ರೈವರ್ ಇಬ್ಬರೇ ಇದ್ದೆವು . ನಾವು ನಮ್ಮ ಸೈಡಿಗೆ ಹೋಗುತ್ತಿದ್ದೆವು . ಅವರು ಅಕಸ್ಮಾತಾಗಿ ಬಂದು ನಮ್ಮ ಗಾಡಿಗೆ ಗುದ್ದಿದರು. ಎದುರು ಗಾಡಿಯವರು ನಮ್ಮ ಸೈಡಿಗೆ ಬಂದು ಗುದ್ದಿದರು . ನಾವು ನಮ್ಮ ಸೈಡನಲ್ಲಿ ಕುಮಟಾ ಕಡೆಗೆ ಹೋಗುತ್ತಿದ್ದೆವು . ಅವರು ಅವರ ಸೈಡ್ ನಿಂದ ಬಂದು ನಮಗೆ ಗುದ್ದಿದರು. ಅಪಘಾತ ನಮ್ಮ ವಾಹನದ ಡ್ರೈವರ್ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಅಪಘಾತವಾದ ನಮ್ಮ ಎಡ ಬದಿಗೆ ಇನ್ನೂ ಜಾಗವಿತ್ತು ಎಂದರೆ ಸರಿಯಲ್ಲ . ನಮ್ಮ ಲಗೇಜ್ ರಿಕ್ಷಾದವನು ಪ್ರಯತ್ನ ಪಟ್ಟಿದ್ದರೆ ಅಪಘಾತವನ್ನು ತಪ್ಪಿಸಬಹುದಿತ್ತು ಎಂದರೆ ಸಾಕ್ಷಿ ಅವರು ತಮ್ಮ ಸೈಡಿನಲ್ಲಿ ಹೊಗುತ್ತಿದ್ದರು ಎಂದು ನುಡಿದಿರುತ್ತಾರೆ . ಸದರಿ ರಸ್ತೆ ಹಾಳಾಗಿದೆ , ಹೊಂಡಗಳು ಇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸ್ವಲ್ಪ ಹೊಂಡ ಬಿದ್ದಿತ್ತು ಎಂದು ನುಡಿದಿರುತ್ತಾರೆ . ಹೊಂಡ ಬಿದ್ದಾಗ ಗಾಡಿಗಳು ಹಗುರವಾಗಿ ಓಡಾಡುತ್ತವೆ ಎಂದರೆ ಸರಿ . ನಾನು ಹಾಗೂ ಡ್ರೈವರ್ ನನ್ನು ಹೊರತು ಪಡಿಸಿ ಬೇರೆ ಯಾರು ಇರಲಿಲ್ಲ . ಎದುರುಗಡೆಯಿಂದ ಬಂದ ಗಾಡಿಯ ಡ್ರೈವರ್ ಗೆ ಲೈಸೆನ್ಸ ಇತ್ತೋ ಇಲ್ಲವೋ ಗೊತ್ತಿಲ್ಲ . ಅವರು ಯಾರು, ಏನು ನಾನು ವಿಚಾರಣೆ ಮಾಡಿಲ್ಲ . ನಮ್ಮ ಗಾಡಿ ಎಷ್ಟು ಸ್ಪಿಡ್ ನಲ್ಲಿ ಹೋಗುತ್ತಿತ್ತು , ಎದುರುಗಡೆಯಿಂದ ಬರುವ ಗಾಡಿ ಎಷ್ಟರ ಸ್ಪಿಡ್ ನಲ್ಲಿ ಬರುತ್ತಿತ್ತು ಹೇಳಲು ಬರುವುದಿಲ್ಲ .

ಪಿಡಬ್ಲ್ಯೂ 2

3. ಅಪಘಾತ ಸಮಯದಲ್ಲಿ ನನಗೆ ಎಷ್ಟು ವರ್ಷ ಆಗಿತ್ತು ಎಂದು ತೋರಿಸಲು ನನ್ನ ಜನ್ಮ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ . ಅಪಘಾತ ಸಮಯದಲ್ಲಿ ನನಗೆ 62 ವರ್ಷ. ಅಪಘಾತ ಸಮಯದಲ್ಲಿ ನನ್ನ ಜೊತೆ ಆಸ್ಪತ್ರೆಯಲ್ಲಿ ನನ್ನ ಗಂಡ ಇದ್ದರು. ಈವತ್ತು ನನ್ನ ಗಂಡ ನನ್ನ ಜೊತೆ ಕೋರ್ಟಿಗೆ ಬಂದಿದ್ದಾರೆ . ಮನೆಯಲ್ಲಿ ನಾನು, ನನ್ನ ಗಂಡ ಇರುತ್ತೇವೆ . ನಾನು ಕೂಲಿ ಕೆಲಸಕ್ಕೆ ಹೋಗುತ್ತೇನೆ. ಈಗ ಕೂಲಿ ಕೆಲಸಕ್ಕೆ ಹೋಗಲು ಆಗುವುದಿಲ್ಲ. ನಾನು ಅರ್ಜಿಯಲ್ಲಿ ಹೇಳಿದಂತೆ ಒಳರೋಗಿಯಾಗಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ಗಾಯ ಕಡಿಮೆಯಾಗುವ ಪೂರ್ವದಲ್ಲಿ ಡಿಸೆಬಿಲಿಸಿಟಿ ಸರ್ಟಿಫಿಕೇಟ್ ಕೊಟ್ಟಿದ್ದಾರೆ ಎಂದರೆ ಸರಿ . ವೈದ್ಯರು ಹೇಳಿದ ರೀತಿಯಲ್ಲಿ ನಾನು ಚಿಕಿತ್ಸೆ ಪಡೆದುಕೊಂಡಿದ್ದರೆ ಈ ಗಾಯ ಯಾವಾಗಲೋ ವಾಸಿಯಾಗುತ್ತಿತ್ತು ಎಂದರೆ ಸರಿ . ನಾನು ವೈದ್ಯರು ನೀಡಿರುವ ಬಿಲ್ ಹಾಗೂ ಸರ್ಟಿಫಿಕೇಟ್ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ . ನಾನು ಹಾಜರು ಪಡಿಸಿದ ಬಿಲ್‌ಗಳಿಗೂ ಹಾಗೂ ಅಪಘಾತಕ್ಕೂ ಸಂಬಂಧವಿಲ್ಲ ಎಂದರೆ ಸರಿಯಲ್ಲ . ನನಗೆ ತಿಂಗಳಿಗೆ 20 ಸಾವಿರ ರೂಪಾಯಿ ಆದಾಯವಿದೆ ಎಂದು ತೋರಿಸಲು ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸರಿ . ನಾವು ಬಿಪಿಎಲ್ ಕಾರ್ಡ ಹೊಂದಿದ್ದೇವೆ . ನಾನು ಪಡೆದಿರುವ ಚಿಕಿತ್ಸೆ ಸರ್ಕಾರಿ ಆಸ್ಪತ್ರೆಯಲ್ಲೂ ಕೂಡ ಪಡೆಯಬಹುದಿತ್ತು ಎಂದರೆ ಸರಿ . ವೈದ್ಯರು ನೀಡಿರುವ ಸರ್ಟಿಫಿಕೇಟ್ ನಲ್ಲಿ ನನಗೆ ಹೆಚ್ಚಿನ ಚಿಕಿತ್ತೆಯ ಅವಶ್ಯಕತೆ ಇದೆ ಎಂದು ಬರೆದಿಲ್ಲ, ಆದರೆ ಮಂಗಳೂರಿಗೆ ಹೋಗಿ ಎಂದು ಹೇಳಿದ್ದರು . ಆಸ್ಪತ್ರೆಯ ಖರ್ಚು ಸಂಜೀವಿನಿ ಯೋಜನೆಯಡಿಯಲ್ಲಿ ಮಂಗಳೂರಿನ ಆಸ್ಪತ್ರೆಯ ಚಿಕಿತ್ಸಾ ವೆಚ್ಚ ಡಿಡಕ್ಟ ಮಾಡಿಕೊಂಡಿದ್ದಾರೆ . ಹಾಗಾಗಿ ಮೆಡಿಕಲ್ ಬಿಲ್ ಗಳು ಇಲ್ಲ . ಅಂಗನ್ಯೂನ್ಯತಾ ಸರ್ಟಫಿಕೇಟ್ ನ್ನು ಕಾರವಾರದ ಆಸ್ಪತ್ರೆಯವರು ಕೊಟ್ಟಿರುತ್ತಾರೆ . ಸರ್ಟಿಫಿಕೇಟ್ ಕೊಡುವಾಗ ನನಗೆ ಆಗಿರುವ ಗಾಯಗಳ ಬಗ್ಗೆ ಕೇಳಿರುತ್ತಾರೆ ಹಾಗೂ ಎಕ್ಸ್ರೇ ಮಾಡಿರುತ್ತಾರೆ . ನಾನು ಮಂಗಳೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ದಾಖಲಾತಿಗಳನ್ನು ವೈದ್ಯರಿಗೆ ಕೊಟ್ಟಿರಲಿಲ್ಲ. ನನ್ನನ್ನು ಸರಿಯಾಗಿ ಪರಿಶೀಕ್ಷಿಸಲು 60% ಡಿಸೆಬಿಲಿಟಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನನ್ನು ಸರಿಯಾಗಿ ಪರೀಕ್ಷೆ ಮಾಡದೇ ಮಾರ್ಟಸೂಚಿ ಅನುಸರಿಸದೇ ನನಗೆ ತಪ್ಪಾದ ಅಂಗನ್ಯೂನ್ಯತಾ ಸರ್ಟಫಿಕೇಟ್ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಾನು ಹೇಳಿದ ರೀತಿಯಲ್ಲಿ ಅಪಘಾತವಾಗಿಲ್ಲ ಎಂದರೆ

ಸರಿಯಲ್ಲ. ವಾಹನ ಸಂಖ್ಯೆ ಕೆಎ–47/5895 ವಾಹನ ಚಾಲಕ ತಪ್ಪಿನಿಂದ ಅಪಘಾತವಾಗಿಲ್ಲ , ಕಾರಣ 2 ನೇ ಎದುರುದಾರ ಕಂಪನಿ ಪರಿಹಾರ ಕೊಡಲು ಭಾಧ್ಯಸ್ಥರಲ್ಲ ಎಂದರೆ ಸರಿಯಲ್ಲ . ನಾನು ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ಅನುಕಂಪದ ಆಧಾರದ ಮೇಲೆ ಹೆಚ್ಚಿನ ಪ್ರಮಾಣದ ಅಂಗನ್ಯೂನ್ಯತಾ ಸರ್ಟಿಫಿಕೇಟ್ ನ್ನು ಪಡೆದುಕೊಂಡು ಬಂದಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.